ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) : ಇದರಲ್ಲಿ ತಮ್ಮ ಕೋಲಾರ ಜಿಲ್ಲೆಯೂ ಕೂಡ ಇದೆ ಅಧ್ಯಕ್ಷರೇ, ಇದರ ಜೊತೆಗೆ ತುಮಕೂರನ್ನು ಸೇರಿಸಬೇಕೆಂದು ಕಳೆದ ವರ್ಷದಲ್ಲೇ ನಾನು ಕೇಳಿದ್ದೆ. ಆದ್ದರಿಂದ ದಯಮಾಡಿ ತಾವು ಈ ವರ್ಷವೇ ತೆಗೆದುಕೊಂಡು ನಮ್ಮ ಜಿಲ್ಲೆಯನ್ನು ಸೇರಿಸಿ ಮಾಡಬೇಕೆಂಬುದು ನಮ್ಮ ಮುಖ್ಯವಾದ ಪ್ರಶ್ನೆ, ಏಕೆಂದರೆ ಕಳೆದ ವರ್ಷಗಳಲ್ಲಿ ವಿದ್ಯುತ್ ಅಭಾವದಿಂದ ರೈತರಿಗೆ ಬಹಳ ಅನಾನುಕೂಲವಾಗಿದೆ, ಆದ್ದರಿಂದ ಇವೆರೆಡು ಜಿಲ್ಲೆಗಳ ಸೇರಿಸಿಕೊಂಡು ಅನುಕೂಲ ಮಾಡಿಕೊಡಬೇಕು. ಇದರ ಬಗ್ಗೆ ಮಂತ್ರಿಗಳು ಹೇಳಬೇಕು.

ಶ್ರೀ ಬಸವರಾಜ್ ಪಾಟೀಲ್ ಹುಮ್ನಾಬಾದ್ : ರಾಜ್ಯದ ಎಲ್ಲಾ ಭಾಗಗಳನ್ನು ಇದರಲ್ಲಿ ಸೇರಿಸಬೇಕು ಎಂದು ಈಗಾಗಲೇ ಹೇಳಿದ್ದೇನೆ. ಈಗಾಗಲೇ 2000 ಕೋಟಿ ರೂಪಾಯಿಗಳ ಹೊಸ ಯೋಜನೆಗಳು ಇವೆ. ಇದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಆದಷ್ಟು ಬೇಗ ಎರಡು ಮೂರು ತಿಂಗಳಲ್ಲಿ ಮಾನ್ಯ ಸದಸ್ಯರು ಹೇಳಿದಂತೆ ಅವರ ಭಾಗದಲ್ಲೂ ಈ ವಿದ್ಯುತ್ ವ್ಯವಸ್ಥೆ ಮಾಡುತ್ತೇವೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಿ.ಆಂಡ್ ಆರ್. ಅನ್ನು ಸರ್ಕಾರ ಅನುಮೋದಿಸುವ ಬಗ್ಗೆ

590 (5079) : ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆ ಕೋರಿ ಸಿ ಅಂಡ್ ಆರ್ ಅನ್ನು ಯಾವಾಗ ಕಳುಹಿಸಲಾಗಿದೆ;

2) ಸದರಿ ವಿಚಾರದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ;

3) ಸದರಿ ಸಿ ಅಂಡ್ ಆರ್ ಗೆ ಅನುಮೋದನೆ ನೀಡುವ ವಿಚಾರದಲ್ಲಿ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):

1) ದಿನಾಂಕ : 28-8-2001.

2) ದಿನಾಂಕ: 3-6-2003 ರಂದು ಅನುಮೋದನೆ ನೀಡಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ತಿಳಿಸಲಾಗಿದೆ.

3) ಅನ್ವಯಿಸುವುದಿಲ್ಲ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ನಗರಾಭಿವೃದ್ಧಿ ಸಚಿವರಲ್ಲಿ ಒಂದು ಅರಿಕೆ ಏನೆಂದರೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ತನ್ನ ಶತಮಾನೋತ್ಸವವನ್ನು ಆಚರಿಸುವ ದಿಕ್ಕಿನಲ್ಲಿ ಕಾರ್ಯೋನ್ಮುಖವಾಗುತ್ತಿದೆ. ಅಲ್ಲಿ ಕೆಲಸ ಮಾಡುತ್ತಿರುವಂತಹ ಸುಮಾರು 250 ಕುಟುಂಬಗಳಿಗೆ ಸರ್ಕಾರದ ಸಿ.ಆಂಡ್ ಆರ್. ರೂಲ್ಸ್ ಪ್ರಕಾರ ಕೊಡಬೇಕಾದಂತಹ ಸೌಲಭ್ಯಗಳನ್ನು ಕೊಡಲಿಲ್ಲ. ನಾನು ಒಬ್ಬ ನಗರಾಭಿವೃದ್ಧಿ ಪ್ರಾಧಿಕಾರದ ಸದಸ್ಯನಾಗಿ ಕೇಳುತ್ತಿದ್ದೇನೆ, ಪ್ರಾಮಾಣಿಕವಾಗಿ ಕಷ್ಟದಲ್ಲಿರುವವರು, ಬಹಳ ಜನ ಇದ್ದಾರೆ, ಸಾಲ ಮಾಡಿಕೊಂಡಿದ್ದಾರೆ, ಮನೆ ಮಾರಿಕೊಂಡಿದ್ದಾರೆ ಬಹಳ ಕಷ್ಟದಲ್ಲಿದ್ದಾರೆ, ಅವರಿಗೆ ಸರ್ಕಾರದಿಂದ ಸಲ್ಲಬೇಕಾದಂಥ ಎಲ್ಲಾ ಸೌಲಭ್ಯಗಳನ್ನು ಕೊಟ್ಟು ಅವರಿಗೆ ಅಭಯಹಸ್ತವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಂಕರಲಿಂಗೇಗೌಡರು ಪ್ರಸ್ತಾಪ ಮಾಡಿರುವಂತೆ, ಅವರ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯ ಸಿ.ಅಂಡ್ ಆರ್. ರೂಲ್ಸ್‌ಗೆ ಸರ್ಕಾರದಿಂದ ಅಪ್ರೂವಲ್ ಕೊಡಬೇಕು ಎಂದು. ದಿನಾಂಕ 28-2-2001ರಲ್ಲಿ ಅವರು ಡ್ರಾಫ್ಟ್ ರೂಲ್ಸ್ ಏನು ಕಳುಹಿಸಿದ್ದರು ಅದಕ್ಕೆ ನಾವು 22-4-2003 ರಲ್ಲಿ ಅಪ್ರೂವಲ್ ಕೊಟ್ಟು ಕಳುಹಿಸಿ ಕೊಟ್ಟಿದ್ದೆವು, ಆದರೆ ಪುನಃ ಏಪ್ರಿಲ್‌ನಲ್ಲಿ ಅದು ಸರಿಯಿಲ್ಲ, ಎರರ್ ಇದೆ ಅದೂ ಕೂಡ ಬದಲಾವಣೆ ಮಾಡಬೇಕೆಂದು ಅವರಿಗೆ ಡೈರೆಕ್ಷನ್ಸ್ ಕೊಟ್ಟಿತ್ತು, ಮೊನ್ನೆ 3-6-2003ರಲ್ಲಿ ತಾವು ಏನು ಕೊಟ್ಟಿದ್ದೀರಿ ಆ ಪ್ರಕಾರ ಲೋಕಲ್ ಇಂಜಿನಿಯರ್ಸ್ ಗೆ ಶೇಕಡ 40, ಡೆಪ್ಯೂಟೇಷನ್ ಮೂಲಕ ಶೇಕಡ 60ರಷ್ಟು ಪಿ.ಡಬ್ಲ್ಯೂ.ಡಿ.ಗೆ ಎಂದು ಕೊಟ್ಟಿದ್ದೆವು. ತಾವು ಮತ್ತೆ ಅದನ್ನು ಶೇಕಡ 75ರಷ್ಟು ಮಾಡಬೇಕೆಂದು ಇನ್ನೊಂದು ರಿಕ್ವೆಸ್ಟ್ ಕೊಟ್ಟಿದ್ದೀರಿ. ಹಾಗಾಗಿ ಶೇಕಡ 75ರಷ್ಟು ಸರ್ಕಾರ ಮಾಡಿದರೆ ಇಡೀ ರಾಜ್ಯದಲ್ಲಿ ಎಲ್ಲಾ ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಗೆ ಒಂದೇ ಕಾನೂನು ಮಾಡಬೇಕಾಗುತ್ತದೆ, ಮೈಸೂರಿಗೆ ಬಂತು. ತುಮಕೂರಿಗೆ ಒಂದು ನಾವು ಮಾಡಲಿಕ್ಕೆ ಆಗುವುದಿಲ್ಲ, ಹಾಗಾಗಿ ತಾವೇನು ಕೊಟ್ಟಿದ್ದೀರಿ ಅದನ್ನು ನಾವು ಪರಿಶೀಲನೆ ಮಾಡುತ್ತಿದ್ದೇವೆ. ಹಿಂದೆ ನಾವು ನೀಡಿರುವಂತೆ ಶೇಕಡ 60 ಹಾಗೂ 40 ಕ್ಕೆ ತಾವು ಒಪ್ಪಿಕೊಳ್ಳುವುದಾದರೆ ನಮ್ಮದೇನೂ ಅಭ್ಯಂತರವಿಲ್ಲ ನಾವು ಈಗಾಗಲೇ ಅದಕ್ಕೆ ಒಪ್ಪಿಗೆ ಕೊಟ್ಟಿದ್ದೇವೆ. ತಾವು ಮೂಲಭೂತವಾಗಿ ನೌಕರರಿಗೆ ಅನುಕೂಲವನ್ನು ಮಾಡಿಕೊಡಿ ಎಂದು ಕೇಳಿರುವ ವಿಚಾರದಲ್ಲಿ ಸರ್ಕಾರದ ಚಿಂತನೆ ಇದೆ, ನಮ್ಮ ಅಭಯ ಹಸ್ತ ಸಂಪೂರ್ಣವಾಗಿ ಮೈಸೂರಿನ ಮೇಲೂ ಇದೆ, ನಿಮ್ಮ ಮೇಲೂ ಇದೆ.

ಉತ್ತರ ಕರ್ನಾಟಕದ ಪಟ್ಟಣ ಮತ್ತು ನಗರಗಳ ಸಮಗ್ರ ಅಭಿವೃದ್ಧಿಗೆ ಏಷ್ಯನ್ ಅಭಿವೃದ್ಧಿ ಬ್ಯಾಂಕಿನ ನೆರವು

592 (5268) : ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ(ತಿಕೋಟ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕರ್ನಾಟಕದ ಪಟ್ಟಣ ಮತ್ತು ಸಮಗ್ರ ಅಭಿವೃದ್ಧಿಗಾಗಿ ಏಷ್ಯಾ ಬ್ಯಾಂಕಿನಿಂದ ನೆರವು ಕಲ್ಪಿಸಲಾಗಿದೆಯೇ?

ಆ) ಉತ್ತರ ಕರ್ನಾಟಕದ ಯಾವ ನಗರ ಮತ್ತು ಪಟ್ಟಣಗಳನ್ನು ಈ ನೆರವಿನಿಂದ ಅಭಿವೃದ್ಧಿ ಪಡಿಸಲಾಗುವುದು?

ಇ) ಏಷ್ಯಾ ಅಭಿವೃದ್ಧಿ ಬ್ಯಾಂಕಿನ ನೆರವನ್ನು ಬಳಸಿಕೊಂಡು ಉತ್ತರ ಕರ್ನಾಟಕದ ನಗರ ಮತ್ತು ಪಟ್ಟಣಗಳಲ್ಲಿ ಯಾವ ಕೆಲಸಗಳನ್ನು ಕೈಗೊಂಡು ಅಭಿವೃದ್ಧಿ ಪಡಿಸಲಾಗುವುದು?

ಈ) ಏಷ್ಯಾ ಅಭಿವೃದ್ಧಿ ಬ್ಯಾಂಕಿನಿಂದ ಒದಗಿಸಲಾಗಿರುವ ನೆರವಿನ ಮೊತ್ತವೆಷ್ಟು?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):

ಅ) ಇನ್ನು ಇಲ್ಲ. ಆದರೆ 2003-04ನೇ ಆಯವ್ಯಯ ಭಾಷಣದಲ್ಲಿ ಉತ್ತರ ಕನ್ನಡದ 20 ಪಟ್ಟಣಗಳನ್ನು ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನೆರವಿನೊಂದಿಗೆ ಅಭಿವೃದ್ಧಿ ಪಡಿಸಲಾಗುವುದು ಎಂದು ಮಾನ್ಯ ಮುಖ್ಯ ಮಂತ್ರಿಗಳು ಪ್ರಕಟಿಸಿದ್ದಾರೆ. ಅದರಂತೆ ಈ ಬಗ್ಗೆ ಪ್ರಾರಂಭಿಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಆ) ಇನ್ನು ನಿರ್ಧಾರವಾಗಿಲ್ಲ.